ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक-संस्कृत-विश्वविद्यालयः
श्री चामराजेन्द्र संस्कृत महाविद्यालयस्य परिसरः,
पम्पमहाकविमार्गः, चामराजपेटे, बेङ्गलूरु - ५६००१८

ಸಂಖ್ಯೆ: ಕಸಂವಿ/ಪರೀಕ್ಷಾಂಗ/ದ.ದೀ.ಘ.ಸಂ.ಕ/2023–24 ದಿನಾಂಕ: 08.01.2024

# ದರಪಟ್ಟಿ ಆಹ್ವಾನ

ವಿಷಯ: ದಶಮ ಹಾಗೂ ಏಕಾದಶ ದೀಕ್ಷಾಂತ ಘಟಿಕೋತ್ಸವಕ್ಕೆ ಸ್ವರ್ಣಪದಕಗಳನ್ನು ಸಿದ್ಧಪಡಿಸಿಕೊಡಲು ದರಪಟ್ಟಿಗಳನ್ನು ಕರೆಯುವ ಬಗೆಗೆ.

ಉಲ್ಲೇಖ: ಮಾನ್ಯ ಕುಲಪತಿಯವರ ಅನುಮೋದನೆ ಕಂಡಿಕೆ ಸಂಖ್ಯೆ: 20; ದಿನಾಂಕ: 08.01.2024.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2021–22ನೇ ಸಾಲಿನ ದಶಮ ಹಾಗೂ 2022–23ನೇ ಸಾಲಿನ ಏಕಾದಶ ದೀಕ್ಷಾಂತ ಘಟಿಕೋತ್ಸವದಲ್ಲಿ ಬಿ.ಎ/ಶಾಸ್ತ್ರಿ/ಎಂ.ಎ/ಆಚಾರ್ಯ/ವಿದ್ಯಾವಾರಿಧಿ ವಿದ್ಯಾರ್ಥಿಗಳಿಗೆ ಘಟಿಕೋತ್ಸವದಲ್ಲಿ ಸ್ವರ್ಣಪದಕಗಳನ್ನು ನೀಡಬೇಕಾಗಿದ್ದು, ಈ ಕೆಳಕಂಡ ವಿವರ ಹಾಗೂ ಷರತ್ತಿಗೊಳಪಟ್ಟು ಸ್ವರ್ಣಪದಕಗಳನ್ನು ಸಿದ್ಧಪಡಿಸಿಕೊಡಲು ಆಸಕ್ತ ಸಂಸ್ಥೆಗಳಿಂದ ದರಪಟ್ಟಿಯನ್ನು ಆಹ್ವಾನಿಸಲಾಗಿದೆ.

| ಕ್ರ ಸಂ | ವಿವರ | ಸಂಖ್ಯೆ | ದರ (ಎಲ್ಲಾ ತೆರಿಗೆಗಳು ಸೇರಿ) |
|---|---|---|---|
| 1 | ದತ್ತಿನಿಧಿ ಸ್ಥಾಪಿಸಿರುವ ಸಂಸ್ಥೆಯ ವಿವರಗಳು ಹಾಗೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಲಾಂಛನ ಒಳಗೊಂಡ 10 ಗ್ರಾಮ್ ರಜತ ಪದಕಕ್ಕೆ 700 ಮಿ.ಗ್ರಾಮ್ ಸ್ವರ್ಣಲೇಪಿತ ಪದಕಗಳು. | 50 | |
| 2 | ದತ್ತಿನಿಧಿ ಸ್ಥಾಪಿಸಿರುವ ಸಂಸ್ಥೆಯ ವಿವರಗಳು ಹಾಗೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಲಾಂಛನ ಒಳಗೊಂಡ 20 ಗ್ರಾಮ್‌ನ ರಜತ ಪದಕಕ್ಕೆ 1ಗ್ರಾಮ್ 400 ಮಿ.ಗ್ರಾಮ್ ಸ್ವರ್ಣಲೇಪಿತ ಪದಕ | 1 | |

**ಷರತ್ತುಗಳು:**

- ಮುಚ್ಚಿದ ಲಕೋಟೆಯ ಮೇಲೆ '**ಸ್ವರ್ಣಪದಕಗಳನ್ನು ಸಿದ್ಧಪಡಿಸಲು ದರಪಟ್ಟಿ**' ಎಂದು ಬರೆಯಬೇಕು.
- ದರಪಟ್ಟಿ ಆಹ್ವಾನಿಸಿದ ದಿನಾಂಕದಿಂದ ಏಳು ಕಾರ್ಯನಿರತ ದಿನಗಳೊಳಗಾಗಿ ಅಂದರೆ ದಿನಾಂಕ: 17.01.2024ರ ಸಂಜೆ 5.30 ಗಂಟೆಯ ಒಳಗಾಗಿ ದರಪಟ್ಟಿಗಳನ್ನು '**ಕುಲಸಚಿವರು(ಮೌಲ್ಯಮಾಪನ), ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–560018**' ಈ ವಿಳಾಸಕ್ಕೆ ಖುದ್ದಾಗಿ ಅಥವಾ ಅಂಚೆಯ ಮೂಲಕ ಸಲ್ಲಿಸಬೇಕು. ಅಂಚೆಯ ಮೂಲಕ ತಲುಪಿಸುವಾಗ ಆಗುವ ವಿಳಂಬಕ್ಕೆ ವಿಶ್ವವಿದ್ಯಾಲಯವು ಜವಾಬ್ದಾರರಾಗಿರುವುದಿಲ್ಲ.
- ದರಪಟ್ಟಿಯನ್ನು ದಿನಾಂಕ: 18.01.2024ರ ಮಧ್ಯಾಹ್ನ 12.00ಕ್ಕೆ ತೆರೆಯಲಾಗುವುದು.

- ಸ್ವರ್ಣಪದಕಗಳನ್ನು ಸಿದ್ಧಪಡಿಸಿ ಸರಬರಾಜು ಮಾಡಲು ಯಾವುದೇ ಮುಂಗಡವನ್ನು ನೀಡಲಾಗುವುದಿಲ್ಲ.
- ಷರತ್ತುಬದ್ಧ ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ.
- ದರಪಟ್ಟಿಯನ್ನು ಸಲ್ಲಿಸುವವರು ಕಡ್ಡಾಯವಾಗಿ GSTIN ಸಂಖ್ಯೆ ಹಾಗೂ PAN ಸಂಖ್ಯೆಯ ದಾಖಲೆಯನ್ನು ಲಗತ್ತಿಸಬೇಕು.
- ದರಪಟ್ಟಿಯಲ್ಲಿ ನಮೂದಿಸಿರುವ ದರಗಳು ತೆರಿಗೆ ಹಾಗೂ ಸೇವೆಯ ಮೊತ್ತವನ್ನು ಒಳಗೊಂಡಿರಬೇಕು ಹಾಗೂ ಅದನ್ನು ಸ್ಪಷ್ಟವಾಗಿ ನಮೂದಿಸಿರಬೇಕು.
- ಪ್ರತಿ ಸಂಸ್ಥೆಗೆ ಒಂದು ದರಪಟ್ಟಿಯನ್ನು ಮಾತ್ರ ಸಲ್ಲಿಸಲು ಅವಕಾಶವಿರುತ್ತದೆ.
- ಸರಬರಾಜು ಆದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.
- ಪದಕಗಳಲ್ಲಿ ವಿಶ್ವವಿದ್ಯಾಲಯದ ಲಾಂಛನ ಹಾಗೂ ಇತರ ವಿವರಗಳಿರಬೇಕು.
- ವಿಶ್ವವಿದ್ಯಾಲಯದ ಲಾಂಛನ ಹಾಗೂ ವಿವರಗಳನ್ನು ಬೇರೆ ಯಾವುದೇ ಉದ್ದೇಶಗಳಿಗೆ ಬಳಸಕೂಡದು.
- ದರಪಟ್ಟಿಯಲ್ಲಿ ವೇಸ್ಟೇಜ್ ಮತ್ತು ಮೇಕಿಂಗ್ ಚಾರ್ಜಸ್ ಗಳನ್ನು ಸ್ಪಷ್ಟವಾಗಿ ನಮೂದಿಸುವುದು.
- ಚಿನ್ನದ ಪದಕಗಳಿಗೆ ಉತ್ತಮ ಬ್ಯಾಡ್ಜ್ ಮತ್ತು ಬಾಕ್ಸ್ ಗಳನ್ನು ನೀಡುವುದು.

**ಆದೇಶದ ಮೇರೆಗೆ,**

ಕುಲಸಚಿವರು (ಮೌಲ್ಯಮಾಪನ)

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**

ಬೆಂಗಳೂರು –18

**Registrar (E)**
Karnataka Samskrit University
Bengaluru - 560018

ಪ್ರತಿಗಳು:

1. ಮಾನ್ಯ ಕುಲಪತಿಗಳ ಆಪ್ತಶಾಖೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
2. ಮಾನ್ಯ ಕುಲಸಚಿವರ ಆಪ್ತಶಾಖೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
3. ಹಣಕಾಸು ಅಧಿಕಾರಿಗಳ ಆಪ್ತಶಾಖೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
4. ಸೂಚನಾ ಫಲಕ ಹಾಗೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಜಾಲತಾಣ.
5. ಕಛೇರಿ ಪ್ರತಿ.